ಸಿಸಿನಂ.197/2023
ಪಿಡಬ್ಲ್ಯೂ: 2

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,</u>
<u>ಕುಮಟಾ.</u>

ಸಿಸಿ ನಂ. 197/2023
ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀ ನಿತ್ಯಾನಂದ |
| ತಂದೆಯ ಹೆಸರು | : | ಪರಮೇಶ್ವರ ನಾಯಕ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಅಂಚೆಸೇವಕ, ಹಿರೇಗುತ್ತಿ |
| ವಾಸ್ತವ್ಯ | : | ಹಿರೇಗುತ್ತಿ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 06-03-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ಪಿರ್ಯಾದುದಾರರ ಪರವಾಗಿ : ಶ್ರೀ ಎನ್ ಎಸ್ ಹೆಚ್ ವಕೀಲರಿಂದ :</u>**

ನಾನು ಕಳೆದ ಎರಡು ವರ್ಷಗಳಿಂದ ಹಿರೇಗುತ್ತಿ ಸಬ್ ಪೋಸ್ಟ ಆಫೀಸ್ ನಲ್ಲಿ ಪೊಪಾಸ್ಟಮೆನ್ ಆಗಿ ಕೆಲಸ ಮಾಡುತ್ತಿದ್ದೇನೆ.

2. ದಿಃ 24-12-2019 ರಲ್ಲಿ ನಾನು ಹಿರೇಗುತ್ತಿ ಸಬ್ ಪೋಸ್ಟ ಆಫೀಸ್ ನಲ್ಲಿ ಪೋಸ್ಟಮೆನ್ ಆಗಿ ಕೆಲಸ ಮಾಡುತ್ತಿದ್ದೇನೆ. ಫಿರ್ಯಾದುದಾರರು ನೋಟಿಸು ಕಳಿಸಿದ ವಿಳಾಸದಾರರು ಗಜಾನನ ಗಣಪತಿ ನಾಯ್ಕ ನನಗೆ ಗೊತ್ತು . ಸದರಿ ಅಂಚೆ ನಮ್ಮ ಕಚೇರಿಗೆ ಬಂದಿತ್ತು . ಸದರಿ ವಿಳಾಸದಾರರು ಅಂಕೋಲಾದಲ್ಲಿ ವಾಸ ಹಾಗೂ ಡ್ರೈವರ್ ಕೆಲಸ ಮಾಡುತ್ತಿದ್ದರು. ನಾವು ನಮ್ಮ ಕಾಗದ ಪತ್ರದ ಮೇಲೆ ಬರೆದುಕೊಂಡು ನಂತರ ಅಂಚೆ ಅಂಕೋಲಾಗೆ ಹೋಯಿತು. ಅಂಚೆ ಲಕೋಟೆ ನಿಪಿ -6 ರ ಮೇಲೆ ಮತ್ತೊಬ್ಬ ಪೋಸ್ಟಮೆನ್ ಷರಾ ಬರೆದಿರುತ್ತಾರೆ . ಅವರ ಹೆಸರು ಅಮರ ವ್ಯಾಪಾರಿ. ಸದರಿ ಅಂಚೆ ಲಕೋಟೆ ನಾನು ಬಟವಡೆ ಮಾಡಿಲ್ಲ . ಮತ್ತೊಬ್ಬ ಪೋಸ್ಟಮೆನ್ ಅಮರ ವ್ಯಾಪಾರಿ ನಮ್ಮ ಪೋಸ್ಟ ಆಫೀಸ್ ನಲ್ಲಿಯೇ ಕೆಲಸ ಮಾಡುತ್ತಿದ್ದಾರೆ .

ನ್ಯಾಯಾಲಯದಿಂದ ಬಂದಿರುವ ಸಮನ್ಸನಲ್ಲಿ ನನ್ನ ಹೆಸರು ಇರಲಿಲ್ಲ . ದಿಃ 01–12–2019 ರಿಂದ ದಿಃ 31–01–2020 ರವರೆಗೆ ಇರುವ ಪೋಸ್ಟಮೆನ್ ಹೀರೆಗುತ್ತಿ ಇವರಿಗೆ ಹೋಗಿತ್ತು . ನಿಪಿ–6 ರಲ್ಲಿ ಬರವಣಿಗೆಯನ್ನು ಅಮರ ವ್ಯಾಪಾರಿ ಮಾಡಿರುತ್ತಾರೆ . ಅವರಿಗೆ ಆ ಬಗ್ಗೆ ಗೊತ್ತಿರುತ್ತದೆ . ಸದರಿ ಅಂಚೆ ಲಕೋಟೆ ನಮ್ಮ ಹಿರೇಗುತ್ತಿ ಆಫೀಸ್ ಗೆ ಬಂದಿತ್ತು .

<u>ಪಾಟೀ ಸವಾಲು</u> : <u>ಆರೋಪಿಯ ಪರವಾಗಿ : ಶ್ರೀ ಪಿ ಎಸ್ ಎನ್ ವಕೀಲರಿಂದ :</u>

3. ಒಂದು ವ್ಯಕ್ತಿಯ ವಿಳಾಸವನ್ನು ಅಂಚೆ ಲಕೋಟೆಯ ಮೇಲೆ ಸ್ಪಷ್ಟವಾಗಿ ಬರೆಯಬೇಕಾಗುತ್ತದೆ ಎಂದರೆ ಸರಿ . ಪೋಸ್ಟ ಕಿಮಾನಿ ವ್ಯಾಪ್ತಿಯ ಬಗ್ಗೆ ನನಗೆ ಗೊತ್ತಿಲ್ಲ . ಪೋಸ್ಟ ಕಿಮಾನಿ ಎಂದು ಬರೆದರೆ ಅದು ಕಿಮಾನಿ ಪೋಸ್ಟ ಆಫೀಸ್ ವ್ಯಾಪ್ತಿಗೆ ಹೋಗುತ್ತದೆ ಹಾಗೂ ಹಿರೇಗುತ್ತಿಪೋಸ್ಟ ಎಂದು ಬರೆದಾಗ ಅದು ಹಿರೇಗುತ್ತಿ ಪೋಸ್ಟ ಆಫೀಸ್ ಗೆ ಬರುತ್ತದೆ ಎಂದರೆ ಸರಿ . ನಿಪಿ–6 ರಲ್ಲಿ ಪೋಸ್ಟ ಕಿಮಾನಿ ಎಂದು ಬರೆದಿದೆ ಎಂದರೆ ಸರಿ . ಒಂದುವೇಳೆ ಸದರಿ ಅಂಚೆ ಪೋಸ್ಟ ನಮ್ಮ ಪೋಸ್ಟ ಆಫೀಸ್ ಗೆ ಬಂದಿದ್ದರೆ ಆ ಬಗ್ಗೆ ದಾಖಲಾತಿ ಇರುತ್ತದೆ ಎಂದರೆ ಸರಿ . ಅಂತಹ ದಾಖಲಾತಿಯನ್ನು ನಾನು ನೋಡಿಲ್ಲ ಎಂದರೆ ಸರಿ . ಒಂದುವೇಳೆ ಸದರಿ ವ್ಯಕ್ತಿ ಅಲ್ಲಿರದಿದ್ದರೆ ಮೊದಲು ಇರುವ ವಿಳಾಸ ಹೊಡೆದು ಹಾಕಿ ಅಂಕೋಲಾದಲ್ಲಿ ಇದ್ದಿದ್ದರೆ ಅಲ್ಲಿಯ ವಿಳಾಸವನ್ನು ಬರೆದು ಕಳುಹಿಸುತ್ತೇವೆ ಎಂದರೆ ಸರಿ . ಅದರ ಬಗ್ಗೆ ಕಾಟ್ ಹಾಕಿ ಸ್ಪಷ್ಟವಾಗಿ ಬರೆಯುತ್ತೇವೆ ಎಂದರೆ ಸರಿ . ಒಂದು ವಿಳಾಸಕ್ಕೆ ಅಂಚೆ ಬಂದಾಗ ಆ ವ್ಯಕ್ತಿ ಊರಲ್ಲಿ ಇರದೇ ಇದ್ದರೆ ವ್ಯಕ್ತಿ ಊರಲ್ಲಿ ಇರುವುದಿಲ್ಲ ಎಂದು ಬರೆದು ಕಳುಹಿಸುತ್ತೇವೆ . ಅಂತಹ ವ್ಯಕ್ತಿ ಇಂತಹ ಊರನಲ್ಲಿ ಇರುವುದಿಲ್ಲ ಎಂದು ಬರೆಯುತ್ತೇವೆ ಎಂದರೆ ಸರಿ . ನಿಪಿ–6 ರಲ್ಲಿ ಕಿಮಾನಿ ಪೋಸ್ಟನವರು ವಿಳಾಸದಾರರು ಕಿಮಾನಿಯಲ್ಲಿ ಯಾರು ಇಲ್ಲದರಿಂದ ಪರತ್ ಕಳಿಸಿದೆ ಎಂದು ಬರೆದಿದೆ ಎಂದರೆ ಸರಿ . ನಿಪಿ–6 ರ ಮೇಲೆ ಕಿಮಾನಿ ಪೋಸ್ಟ ಆಫೀಸನವರ ಸೀಲ್ ಇದೆ . ನಿಪಿ–6 ರಲ್ಲಿ ಹಿರೇಗುತ್ತಿ ಪೋಸ್ಟ ಸೀಲ್ ಕಾಣುತ್ತಿಲ್ಲ . ಒಂದುವೇಳೆ ಹಿರೇಗುತ್ತಿ

ಪೋಸ್ಟಗೆ ಬಂದಿದ್ದರೆ ಹಾಗೂ ಅಂಕೋಲಾಗೆ ಕಳುಹಿಸಿದ್ದರೆ ಅಂತಹ ವಿಳಾಸ ಕಾಣುತ್ತಿತ್ತು , ಆ ವಿಳಾಸ ನಿಪಿ-6 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ . ಕಿಮಾನಿಯವರೇ ಸದರಿ ಷರಾ ಬರೆದಿದ್ದಾರೆ , ಅಮರ ವ್ಯಾಪಾರಿ ಅಲ್ಲ. ಹೀರೆಗುತ್ತಿಯ ಪಿನ್ ಕೋಡ್ 581333 . ಒಂದುವೇಳೆ ವಿಳಾಸ ತಪ್ಪಿದ್ದರೂ ಕೂಡ ಪಿನ್ ಕೋಡ್ ನಮೂದಿಸಿದ್ದರೆ ಹಾಗೂ ಸರಿ ಇದ್ದರೆ ಹೀರೆಗುತ್ತಿಗೆ ಬರುವ ಸಾಧ್ಯತೆ ಇರುತ್ತದೆ ಎಂದರೆ ಸರಿ . ನಿಪಿ-6 ರಲ್ಲಿ ಹಿರೇಗುತ್ತಿಯ ಪಿನ್ ಕೋಡ ಇಲ್ಲ ಎಂದರೆ ಸರಿ . ವಿಳಾಸದಲ್ಲಿ ಆ ವ್ಯಕ್ತಿ ಇರುವುದಿಲ್ಲ ಎಂದು ಬರೆದವರು ಸಹಿ ಹಾಕಬೇಕಾಗುತ್ತದೆ ಎಂದರೆ ಸರಿ . ನಿಪಿ-6 ರಲ್ಲಿ ಅಂತಹ ಸಹಿ ಕಾಣುತ್ತಿದೆ ಎಂದರೆ ಸರಿ . ಸದರಿ ಸಹಿ ನನ್ನದ್ದಲ್ಲ ಎಂದರೆ ಸರಿ . ದಿಃ 01-12-2019 ರಿಂದ ದಿಃ 31-01-2020 ರ ಅವಧಿಯಲ್ಲಿ ನಾನು ಹಿರೇಗುತ್ತಿ ಪೋಸ್ಟ ಆಫೀಸ್ ನಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ . ಅಮರ ವ್ಯಾಪಾರಿ ಕೂಡ ಇತ್ತೀಚೆಗೆ ಒಂದುವರೆ ವರ್ಷದಿಂದ ಹಿರೇಗುತ್ತಿ ಪೋಸ್ಟ ಆಫೀಸ್ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ . ನಿಪಿ-6 ರಲ್ಲಿ ಕಿಮಾನಿ ಪೋಸ್ಟ ಆಫೀಸ್ ನವರು ಹಿಂಬರಹ ಬರೆದಿರುವುದರಿಂದ ಹಾಗೂ ಕಿಮಾನಿ ಪೋಸ್ಟ ಆಫೀಸ್ ನ ಸೀಲ್ ಇರುವುದರಿಂದ ಅವರೇ ಸಾಕ್ಷ್ಯ ನುಡಿಯಲು ಸಕ್ಷಮರು ಎಂದರೆ ಸರಿ .

<u>ಮರು ವಿಚಾರಣೆ :ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.